# ನಗರಸಭಾ ಕಾರ್ಯಾಲಯ, ಮಂಡ್ಯ

ಸಂಖ್ಯೆ: ನಸಮಂ/ಪ.ಅ/ಸಿ.ಆರ್/06/2009–10 ದಿನಾಂಕ: 05/09/2009

## ಕರಪತ್ರ ಪ್ರಕಟಣೆ

ಘನತ್ಯಾಜ್ಯ ವಸ್ತುಗಳನ್ನು ವ್ಯವಸ್ಥಿತವಾಗಿ ಸಂಗ್ರಹಿಸಿ ವಿಲೇ ಮಾಡುವುದರಲ್ಲಿ ತೋರಿಸಿದ ನಿರ್ಲಕ್ಷತೆಯ ಪರಿಣಾಮದಿಂದ ಕಾಲರ, ಮಲೇರಿಯ, ಮೆದುಳು ಜ್ವರ, ಚಿಕನ್‌ಗುನ್ಯ ಮುಂತಾದ ಸಾಂಕ್ರಾಮಿಕ ರೋಗಗಳು ಹರಡುವುದಲ್ಲದೆ ಕೊಳೆತ ಕಸದಿಂದ ಉಂಟಾದ ವಾಸನೆ ಸುತ್ತಮುತ್ತಲಿನ ನಾಗರೀಕರಿಗೆ ಕಿರಿ ಕಿರಿ ಉಂಟುಮಾಡುವುದಲ್ಲದೆ ತ್ಯಾಜ್ಯದಿಂದ ಉತ್ಪತ್ತಿಯಾಗುವ ಲಿಚೆಟ್ ಎನ್ನುವ ಅಪಾಯಕಾರಿ ದ್ರಾವಣವು ವಿವಿಧ ನೀರಿನ ಮೂಲಗಳು ಮತ್ತು ಅಂತರ್ಜಲವನ್ನು ಕಲುಷಿತಗೊಳಿಸುತ್ತಿರುವುದು ನಮಗೆಲ್ಲಾ ತಿಳಿದ ವಿಷಯವೇ ಆಗಿದೆ.

ಕಸ ಮತ್ತು ಆರೋಗ್ಯವು ಒಂದೇ ನಾಣ್ಯದ ಎರಡು ಮುಖಗಳಾಗಿದ್ದು, ತ್ಯಾಜ್ಯದ ಅವ್ಯವಸ್ಥಿತ ನಿರ್ವಹಣೆಯು ಸಾರ್ವಜನಿಕ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದು ಕಂಡಿತ. ಆದ್ದರಿಂದ ಕಸದ ದುಷ್ಪರಿಣಾಮವನ್ನು ತಡೆಗಟ್ಟಲು ನಾವೆಲ್ಲರೂ ಕಾರ್ಯ ಪ್ರವೃತ್ತರಾಗಬೇಕಾದ ಅವಶ್ಯಕತೆ ಎಷ್ಟಾದರೂ ಇದೆ. ಇದರಲ್ಲೂ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಪಾತ್ರವಂತು ಬಹಳ ಮಹತ್ವದ್ದಾಗಿದೆ, ಯಾಕೆಂದರೆ ಇಂದಿನ ವಿದ್ಯಾರ್ಥಿಗಳೇ ಮುಂದಿನ ಪ್ರಜೆಗಳು, ಪರಿಸರ ಸಂರಕ್ಷಣೆಯ ಬಗ್ಗೆ ಕಾಳಜಿಯನ್ನು ವಿದ್ಯಾರ್ಥಿಗಳಲ್ಲಿ ಈಗ ನಾಟಿದಲ್ಲಿ ಮುಂದೆ ಅದೇ ಕಾಳಜಿ ಜವಾಬ್ದಾರಿಯಾಗಿ ಪರಿವರ್ತಿತವಾಗಿ ರೂಪುಗೊಳ್ಳುವುದರಲ್ಲಿ ಅತಿಶಯೋಕ್ತಿಯೇನಿಲ್ಲ.

ತ್ಯಾಜ್ಯದಿಂದ ಆಗುವ ದುಷ್ಪರಿಣಾಮಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ನಗರಸ್ಥಳೀಯ ಸಂಸ್ಥೆಯ ಪಾತ್ರವೇ ಪ್ರಮುಖವಾಗಿರುವುದು ನಿಜವಾದರೂ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯಿಂದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವ್ಯವಸ್ಥಿತ ತ್ಯಾಜ್ಯ ನಿರ್ವಹಣೆಯನ್ನು, ಒಂದು ಸ್ವಚ್ಛತಾ ಆಂದೋಲನವನ್ನಾಗಿ ಪರಿವರ್ತಿಸಬಹುದು. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ತ್ಯಾಜ್ಯ ನಿರ್ವಹಣೆ, ಪ್ಲಾಸ್ಟಿಕ್ ಬಳಕೆಯ ದುಷ್ಪರಿಣಾಮದ ಬಗ್ಗೆ ಅರಿವು ಮೂಡಿಸಿ ಸಂಪನ್ಮೂಲದ ಸದ್ಬಳಕೆಯಾಗುವಂತೆ ಖಾತ್ರಿ ಪಡಿಸಿಕೊಳ್ಳುವ ನಿಟ್ಟಿನಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳಲು ಪ್ರೇರೇಪಿಸುವಂತೆ ಮಾಡಲು ನಗರಸಭೆ, ಮಂಡ್ಯ ವತಿಯಿಂದ ವಿವಿಧ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ.. ಸ್ಪರ್ಧೆಯ ವಿವರಣೆಗಳು ಕೆಳಕಂಡಂತಿರುತ್ತದೆ.

**ಸ್ಪರ್ಧೆಯ ವಿವರಗಳು:**

| | | | |
|---|---|---|---|
| 5 ರಿಂದ 7ನೇ ತರಗತಿ ವಿದ್ಯಾರ್ಥಿಗಳಿಗೆ | ವರ್ಣ ಚಿತ್ರ ಬಿಡಿಸುವ ಸ್ಪರ್ಧೆ | ದಿನಾಂಕ : 08/10/2009<br>ಸ್ಥಳ : ಜಯಚಾಮರಾಜೇಂದ್ರ ಟೌನ್ ಹಾಲ್, ನಗರಸಭೆ, ಮಂಡ್ಯ.<br>ಸಮಯ : ಬೆಳಿಗ್ಗೆ 10–30 ಗಂಟೆ | ಮೊದಲನೆಯ ಬಹುಮಾನ – ರೂ. 2000/–<br>ಎರಡನೆಯ ಬಹುಮಾನ – ರೂ. 1000/–<br>ಮೂರನೆಯ ಬಹುಮಾನ – ರೂ. 500/– |
| 8 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ | ಪ್ರಬಂಧ ಸ್ಪರ್ಧೆ | ದಿನಾಂಕ : 06/10/2009<br>ಸ್ಥಳ : ಎಕ್ಸ್ ಮುನಿಸಿಪಲ್ ಹೈಸ್ಕೂಲ್, ಎಂ.ಸಿ ರಸ್ತೆ, ಮಂಡ್ಯ.<br>ಸಮಯ : ಬೆಳಿಗ್ಗೆ 10–30 ಗಂಟೆ | ಮೊದಲನೆಯ ಬಹುಮಾನ – ರೂ. 3000/–<br>ಎರಡನೆಯ ಬಹುಮಾನ – ರೂ. 2000/–<br>ಮೂರನೆಯ ಬಹುಮಾನ – ರೂ. 1000/– |
| ಕಾಲೇಜು ವಿದ್ಯಾರ್ಥಿಗಳಿಗೆ | ಚರ್ಚಾಸ್ಪರ್ಧೆ/ ಭಾಷಣ ಸ್ಪರ್ಧೆ | ದಿನಾಂಕ : 09/10/2009<br>ಸ್ಥಳ : ಜಯಚಾಮರಾಜೇಂದ್ರ ಟೌನ್ ಹಾಲ್, ನಗರಸಭೆ, ಮಂಡ್ಯ.<br>ಸಮಯ : ಬೆಳಿಗ್ಗೆ 10–30 ಗಂಟೆ | ಮೊದಲನೆಯ ಬಹುಮಾನ – ರೂ. 5000/–<br>ಎರಡನೆಯ ಬಹುಮಾನ – ರೂ. 3000/–<br>ಮೂರನೆಯ ಬಹುಮಾನ – ರೂ. 2000/– |

ಮೇಲ್ಕಂಡ ಸ್ಪರ್ಧೆಯಲ್ಲಿ ವಿಜೇತರಾದ ಎಲ್ಲ ವಿದ್ಯಾರ್ಥಿ–ವಿದ್ಯಾರ್ಥಿನಿಯರುಗಳಿಗೆ ನವೆಂಬರ್ 1ರಂದು ಅಥವ ನಗರಸಭೆ, ಮಂಡ್ಯ ಕನ್ನಡ ರಾಜ್ಯೋತ್ಸವವನ್ನು ಆಚರಿಸುವ ದಿನದಂದು ಅಧ್ಯಕ್ಷರಿಂದ ಬಹುಮಾನ ವಿತರಣೆಯನ್ನು ನಡೆಸಲು ತೀರ್ಮಾನಿಸಲಾಗಿದೆ. ಪ್ರತಿಯೊಂದು ವರ್ಗದಲ್ಲಿ ಪ್ರಥಮ ಬಹುಮಾನ ಪಡೆದ ಶಾಲಾ ಕಾಲೇಜುಗಳಿಗೆ ನಿರ್ದೇಶನಾಲಯದ ವತಿಯಿಂದ ರೋಲಿಂಗ್ ಟ್ರೋಫಿಗಳನ್ನು ನೀಡಲು ಉದ್ದೇಶಿಸಲಾಗಿದ್ದು, ಈ ಸ್ಪರ್ಧೆಗಳಲ್ಲಿ ಎಲ್ಲಾ ಶೈಕ್ಷಣಿಕ ಸಂಸ್ಥೆಗಳು ಪಾಲ್ಗೊಂಡು ಸ್ವಚ್ಛತಾ ಅಭಿಯಾನವನ್ನು ಯಶಸ್ವಿಗೊಳಿಸಬೇಕೆಂದು ಕೋರಿದೆ

| | | |
|---|---|---|
| ಸಹಿ/– | ಸಹಿ/– | ಸಹಿ/– |
| ಪೌರಾಯುಕ್ತರು, | ಉಪಾಧ್ಯಕ್ಷರು, | ಅಧ್ಯಕ್ಷರು, |
| ನಗರಸಭೆ, ಮಂಡ್ಯ | ನಗರಸಭೆ, ಮಂಡ್ಯ | ನಗರಸಭೆ, ಮಂಡ್ಯ |